
ಎಲೆಎಲೆಯ ಮೇಲೆ
ಹೊಳೆಹೊಳೆವ ಲೀಲೆ
ಇಳಿಯುತ್ತದೆ ಕೆಳಗೆ
ಬಿಳಿಮರಳಿನ ಹಾಗೆ.

ಬೆದೆಬಂದ ಮಿಡತೆ
ಗರಗರ ಗರಗಸ ಗುಂಯ್ಯನೆ ಹಾಡನ್ನು
ತೂರುತ್ತಿದೆ ಖಾಲಿಯೊಳಗೆ.

ಲೋಕ
ತುಂಬಿತುಳುಕುತ್ತಿರುವ
ನೀರಿನ ಬಟ್ಟಲು.



## ಹೆಣ್ಣಿನ ದೇಹ

ಹೆಣ್ಣಿನ ದೇಹವೇ, ಬಿಳಿ ಬೆಟ್ಟಗಳೇ, ಬಿಳಿ ತೊಡೆಗಳೇ,
ಶರಣಾಗತ ಭಂಗಿಯಲ್ಲಿ ಕಾಣುವೆ ನೀನು ಭೂಮಿಯಂತೆ.
ಗುಳಗುದ್ದಲಿಯಂಥ ನನ್ನ ಒರಟು ರೈತನ ದೇಹ ಅಗೆಯುತ್ತದೆ ನಿನ್ನ
ನೆಲದಾಳದಿಂದ ಚಿಮ್ಮಿಸುತ್ತದೆ ಮಗನನ್ನ.

ಒಂಟಿಯಾಗಿದ್ದೆ ನಾನು ಒಂದು ಸುರಂಗ. ಹಾರಿಹೋಯಿತು ನನ್ನಿಂದ ಹಕ್ಕಿಬಳಗ,
ಇರುಳು ಆಕ್ರಮಿಸಿತು ತನ್ನ ಸೈನ್ಯದೊಡನೆ ನನ್ನ.
ಬದುಕಿಸಿಕೊಳ್ಳಲು ನನ್ನ ಬಳಸಿಕೊಂಡೆನು ಆಯುಧದ ಹಾಗೆ ನಿನ್ನ,
ನನ್ನ ಬಿಲ್ಲಿಗೆ ನೀನು ಬಾಣದಂತೆ ಕವಣೆಯೊಳಗಡೆ ಕಲ್ಲಿನಂತೆ.

ಮುಗಿದಿದೆ ಈಗ ಸೇಡುಗಾಲ, ಪ್ರೀತಿಸುತ್ತೇನೆ ನಾನು ನಿನ್ನನ್ನು.
ಮೆತ್ತನೆಯ ಮೈತೊಗಲು, ನುಣುಪು ಪಾಚಿಮೈ, ಹಾಲುತುಂಬಿದ ಚೆಲುವೆ ನೀನು.
ಎದೆಬಟ್ಟಲ ತುಂಬ ಹಾಲು! ಇದ್ದೂ ಇಲ್ಲದ ಹಾಗಿರುವ ನಿನ್ನ ಕಣ್ಣನೋಟ!
ತೊಡೆನಡುವಿನುಬ್ಬಿನಲಿ ಅರಳಿದ ಗುಲಾಬಿಗಳು!
ದುಃಖತುಂಬಿದ ನಿನ್ನ ದನಿಯು ಮಂದ, ಮಂದ್ರ!

ನನ್ನ ಹೆಣ್ಣಿನ ಒಡಲೇ, ನಿನ್ನ ಚೆಲುವ ಲಾವಣ್ಯದಲಿ ಚಿರವಾಗಿ ನೆಲೆಸುವೆನು ನಾನು.
ನನ್ನ ಬಾಯಾರಿಕೆಯೇ, ಕೊನೆಮೊದಲಿಲ್ಲದ ಹಂಬಲವೇ, ಸಂದಿಗ್ಧ ಹಾದಿಯೇ!
ಅನಾದಿಅನಂತ ಬಾಯಾರಿಕೆ ಹರಿಯುತ್ತಲೇ ಇರುವ ಗಾಢನಿಗೂಢ ನದಿಯಡಿಯ ನೆಲಗಳೇ,
ಹರಿಯುತ್ತಲೇ ಇದೆ ನಿರಂತರ ದಣಿವಿನ ಹೊನಲು, ದಡಗಳೇ ಇಲ್ಲದ ಆಳಲು.